# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಫೋನ್‌ನಂ: 0821 – 2417106
ಫ್ಯಾಕ್ಸ್ ನಂ: 0821 – 2417105
e-mail:fa@cescmysore.org
CIN:U40109KA2004SGCO35177

ನಿಗಮ ಕಾರ್ಯಾಲಯ,
ನಂ.29, ವಿಜಯ ನಗರ 2ನೇ ಹಂತ,
ಹಿನಕಲ್, ಮೈಸೂರು.570017.

ಕ್ರಮಾಂಕ:ಮುಆಅ/ಪ್ರವ್ಯ/ಉಪ್ರವ್ಯ(ತೆರಿಗೆ)/ಸಪ್ರವ್ಯ(ತೆ)/ಹಿಸ(ತೆ)/18-19/ Cys-1671 ದಿನಾಂಕ: 26 FEB 2019
ಲಗತ್ತು:

ಗೆ,
ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾ ಮತ್ತು ಪಾ ವಿಭಾಗ,
ಚಾವಿಸನಿನಿ.

ಮಾನ್ಯರೆ,

**ವಿಷಯ:** ವಿವಿಧ ಸಾಮರ್ಥ್ಯದ ಪರಿವರ್ತಕಗಳ ದುರಸ್ತಿ ಹುಂಡಿಗಳ ವಿವರಗಳನ್ನು ತಪ್ಪಾಗಿ ಸಲ್ಲಿಸುತ್ತಿರುವುದು ಹಾಗೂ ನಿಯೋಜಿತ ಸಮಯದೊಳಗೆ ಸಲ್ಲಿಸದಿರುವ ಬಗ್ಗೆ.

**ಉಲ್ಲೇಖ:** ಈ ಕಛೇರಿ ಪತ್ರ ಸಂಖ್ಯೆ: ಮುಆಅ/ಪ್ರವ್ಯ/ಉಪ್ರವ್ಯ(ತೆರಿಗೆ)/ಸಪ್ರವ್ಯ(ತೆ)/ಹಿಸ(ತೆ)/18-19/ Cys-1174 ದಿನಾಂಕ:30.11.2018.

**********

ಮೇಲ್ಕಂಡ ಉಲ್ಲೇಖದನ್ವಯ, ಡಿಸೆಂಬರ್-2018ರ ಮಾಹೆಯಲ್ಲಿ ಕಳೆದ ಜುಲೈ-2017ರಿಂದ ಸೆಪ್ಟೆಂಬರ್-2018ರವರೆಗಿನ ತ್ರೈಮಾಸಿಕ ಪರಿವರ್ತಕಗಳ ದುರಸ್ತಿ (Job Work) ವಿವರಗಳನ್ನು ನಿಗಧಿತ ನಮೂನೆಯಲ್ಲಿ ಸಲ್ಲಿಸುವಂತೆ ಸೂಚಿಸಲಾಗಿತ್ತು. ಅದರಂತೆ ಎಲ್ಲಾ ವಿಭಾಗಗಳಿಂದ ಸಲ್ಲಿಸಿರುವ ವಿವರಗಳನ್ನು ಕ್ರೋಢೀಕರಿಸಿ ಜಿ.ಎಸ್.ಟಿ ಪೋರ್ಟಲ್‌ನಲ್ಲಿ ಐ.ಟಿ.ಸಿ-04 (Job Work) ರಿಟರ್ನ್ಸ್ ಫೈಲ್ ಮಾಡಲಾಗಿರುತ್ತದೆ. ಹಾಗೂ ಪ್ರತಿ ತ್ರೈಮಾಸಿಕದ ಅಂತ್ಯದಲ್ಲಿ ವಿವರಗಳನ್ನು ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.

ಮೇಲೆ ತಿಳಿಸಿರುವಂತೆ ಆರ್ಥಿಕ ವರ್ಷ 2018-19ರ 3ನೇ ತ್ರೈಮಾಸಿಕದ Job Work ವಿವರಗಳನ್ನು ಆನ್‌ಲೈನ್ ಮೂಲಕ ಶೇರ್ ಮಾಡಲಾದ Excel Sheetನಲ್ಲಿ ಮಾಹಿತಿ ನೀಡುವಂತೆ ಹಲವು ಬಾರಿ ದೂರವಾಣಿ ಮುಖಾಂತರ ತಿಳಿಸಲಾಗಿತ್ತು, ಆದರೆ ಕೆಲವು ವಿಭಾಗಗಳು ಇದುವರೆವಿಗೂ ವಿವರಗಳನ್ನು ಸಲ್ಲಿಸಿರುವುದಿಲ್ಲ.

ಅಲ್ಲದೆ ಹಲವು ವಿಭಾಗಗಳು ಸಲ್ಲಿಸಿರುವ ಮಾಹಿತಿಯಲ್ಲಿ ಈ ಕೆಳಕಂಡ ನ್ಯೂನ್ಯತೆಗಳು ಕಂಡುಬಂದಿರುತ್ತದೆ.

1. 1ನೇ ಮತ್ತು 2ನೇ ತ್ರೈಮಾಸಿಕದ ರಿಟರ್ನ್ಸ್ ಈಗಾಗಲೇ ಮಾಡಲಾಗಿದ್ದು, 1ನೇ ಹಾಗೂ 2ನೇ ತ್ರೈಮಾಸಿಕ (ಏಪ್ರಿಲ್ ರಿಂದ ಸೆಪ್ಟೆಂಬರ್) ವಿವರಗಳನ್ನು 3ನೇ ತ್ರೈಮಾಸಿಕ ವಿವರಗಳ ಜೊತೆ ಸಲ್ಲಿಸಿರುವುದು ಕಂಡುಬಂದಿರುತ್ತದೆ.
2. ಕೆಲವು ವಿಭಾಗಗಳಿಂದ ನೀಡಿರುವ ತ್ರೈಮಾಸಿಕ ವಿವರಗಳು ಅಪೂರ್ಣವಾಗಿರುತ್ತದೆ, ಅಂದರೆ ನಮೂನೆ-1ರಲ್ಲಿ ಕೆಲವು ವಿಭಾಗಗಳು PO ಮಾಹಿತಿ ಒದಗಿಸಿರುವುದಿಲ್ಲ, ಹಾಗೂ ಪರಿವರ್ತಕಗಳ SR ಮೊತ್ತ ನೀಡಿರುವುದಿಲ್ಲ. ಪರಿವರ್ತಕಗಳ SR ಮೊತ್ತದ ವಿವರಗಳನ್ನು ನೀಡದಿದ್ದಲ್ಲಿ Nil ಎಂದು ಪರಿಗಣಿಸಿ ರಿಟರ್ನ್ಸ್ ಫೈಲ್ ಮಾಡಲಾಗುವುದು.

ಪು.ತಿ.ನೋ.

3. ಹಾಗೂ ನಮೂನೆ-2ರಲ್ಲಿ TC ರಿಪೇರಿ ಇನ್ವಾಯ್ಸ್ ಮೊತ್ತದ ವಿವರಗಳನ್ನು ನೀಡಿರುವುದಿಲ್ಲ. TC ರಿಪೇರಿ ಇನ್ವಾಯ್ಸ್ ಮೊತ್ತದ ವಿವರಗಳನ್ನು ನೀಡದಿದ್ದಲ್ಲಿ Nil ಎಂದು ಪರಿಗಣಿಸಲಾಗುವುದು. ಹಾಗೂ ವಿಭಾಗಗಳು ನೀಡಿರುವ ಮಾಹಿತಿಯು ಅಪೂರ್ಣವಾಗಿರುವುದರಿಂದ ನಿಗಮದ ಹಂತದಲ್ಲಿ ವಿವರಗಳನ್ನು ಕ್ರೋಢೀಕರಿಸಿ, ಐ.ಟಿ.ಸಿ-04 (Job Work) ರಿಟರ್ನ್ಸ್ ಫೈಲ್ ಮಾಡಲು ವಿಳಂಬವಾಗಿರುತ್ತದೆ.

ಮೇಲಿನ ವಿಷಯವನ್ನು ಗಮನದಲ್ಲಿಟ್ಟುಕೊಂಡು, ಪ್ರತಿ ತ್ರೈಮಾಸಿಕದ ವಿವರಗಳನ್ನು ನಿಗಧಿತ ದಿನಾಂಕ ಅಂದರೆ ತ್ರೈಮಾಸಿಕದ ಮುಂದಿನ ಮಾಹೆಯ 5ನೇ ದಿನಾಂಕದೊಳಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ನಿಗಧಿಪಡಿಸಿದ ದಿನಾಂಕದೊಳಗೆ ವಿವರಗಳನ್ನು ಸಲ್ಲಿಸದಿದ್ದ ಪಕ್ಷದಲ್ಲಿ, ಅಂತಹ ವಿಭಾಗಗಳ ವಿವರಗಳನ್ನು ಗಣನೆಗೆ ತೆಗೆದುಕೊಳ್ಳದೆ ರಿಟರ್ನ್ಸ್ ಫೈಲ್ ಮಾಡಲಾಗುವುದು.

ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಮುಂದಿನ ದಿನಗಳಲ್ಲಿ ವಿವರಗಳನ್ನು ನಿಗಧಿತ ಸಮಯದಲ್ಲಿ ಸಲ್ಲಿಸಲು ಸೂಚಿಸಲಾಗಿದೆ. ಹಾಗೂ ಈ ವಿಚಾರವಾಗಿ ಸದರಿ ಪ್ರಾಧಿಕಾರದವರು ವಾರ್ಷಿಕ ಕರ ನಿರ್ಧಾರಣಾ(Yearly Assesment) ಸಮಯದಲ್ಲಿ ಹೆಚ್ಚುವರಿ ತೆರಿಗೆಯನ್ನು ಪಾವತಿಸುವ ಸಂದರ್ಭ ಬಂದರೆ ಹಾಗೂ ವಿವರಗಳನ್ನು ತಡವಾಗಿ ಸಲ್ಲಿಸುವುದರಿಂದ ರಿಟರ್ನ್ಸ್ ಫೈಲ್ ಮಾಡಲು ವಿಳಂಬವಾದ ಕಾರಣ ದಂಡ ಪಾವತಿಸುವ ಸಂದರ್ಭ ಉಂಟಾದರೆ ಸಂಬಂಧಪಟ್ಟ ಅಧಿಕಾರಿ/ನೌಕರರೇ ಹೊಣೆಗಾರರಾಗಿರುತ್ತಾರೆ.

ತಮ್ಮ ವಿಶ್ವಾಸಿ,

ಮುಖ್ಯ ಆರ್ಥಿಕ ಅಧಿಕಾರಿ.

**ಪ್ರತಿಗಳು:-**

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ. ಪ) ಚಾವಿಸನಿನಿ,ನಿಗಮ ಕಛೇರಿ ಮೈಸೂರು, ರವರ ಮಾಹಿತಿಗಾಗಿ.
- ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಕಾ ಮತ್ತು ಪಾ ವಲಯ ಕಛೇರಿ, ಮೈಸೂರು.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಕಛೇರಿಗಳು ಚಾವಿಸನಿನಿ,
- ಉಪ ಪ್ರಧಾನ ವ್ಯವಸ್ಥಾಪಕರು (ಎಮ್.ಐ.ಎಸ್) ನಿಗಮದ ಅಧಿಕೃತ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು.
- ಸಹಾಯಕ ಪ್ರಧಾನ ವ್ಯವಸ್ಥಾಪಕರು(ತೆರಿಗೆ) ಚಾವಿಸನಿನಿ, ನಿಗಮ ಕಛೇರಿ ಮೈಸೂರು.
- ಮು.ಕ.